No.MAG(3)/NPP/98/2023-2024

No.MAG(3)/NPP/99/2023-2024



ಸ್ಥಾಪನೆ : ೧೯೭೯

# ಹೊಂಗನಸು



ಬಿ.ಎಂ.ಶ್ರೀ. ಪ್ರತಿಷ್ಠಾನದ ವಾರ್ತಾಲಾಪ

ಹೊಂಗನಸು–೧೧೯

ಸಂಪುಟ: ೧೩ ಸಂಚಿಕೆ: ೭ | ಅಕ್ಟೋಬರ್ ೨೦೨೫ | ಪುಟಗಳು-೮ | ವಾರ್ಷಿಕ ಚಂದಾ ರೂ.೨೦/- | ಶ್ರೀ ವಿಶ್ವಾವಸು ಸಂವತ್ಸರ
Volume: 13 Issue: 7 | October 2025 | Pages-8 | Annual Subscription Rs.20/- | ಆಶ್ವೀಜ-ಕಾರ್ತೀಕ ಮಾಸ

ಪ್ರಕಾಶಕರು
**ಬಿ.ಎಂ.ಶ್ರೀ. ಪ್ರತಿಷ್ಠಾನ**

ಪ್ರಧಾನ ಸಂಪಾದಕರು
**ಡಾ. ರಾಮೇಗೌಡ**

ಸಂಪಾದಕರು
**ಡಾ. ಬೆಳವಾಡಿ ಪ್ರಭಾಕರ**

**ಬಿ.ಎಂ.ಶ್ರೀ. ಪ್ರತಿಷ್ಠಾನ**
**ಎಂ.ವಿ.ಸೀ. ಸ್ನಾತಕೋತ್ತರ ಕೇಂದ್ರ**
ಬಿ.ಎಂ.ಶ್ರೀ. ಪ್ರತಿಷ್ಠಾನದ ರಸ್ತೆ
೩ನೇ ಮುಖ್ಯರಸ್ತೆ
ನರಸಿಂಹರಾಜ ಕಾಲೋನಿ
ಬೆಂಗಳೂರು - ೫೬೦೦೦೪
ಮೊಬೈಲ್ : ೯೯೭೨೮೧೨೧೨೭
ಇ-ಮೇಲ್ : bmsritrust@gmail.com
ಅಂತರ್ಜಾಲ : www.bmshri.org

**ಕಛೇರಿ ಸಮಯ**
ಬೆಳಗ್ಗೆ ೧೦-೩೦ ರಿಂದ ಸಂಜೆ ೫-೩೦
ವಾರದ ರಜಾ ದಿನ : ಭಾನುವಾರ

**ಚಂದಾ ವಿವರ**
ವಾರ್ಷಿಕ ಚಂದಾ : ರೂ. ೨೦/-
ಐದು ವರ್ಷಗಳ ಚಂದಾ : ರೂ. ೧೦೦/-

**ದಿ। ಪ್ರೊ. ಎಂ.ವಿ. ಸೀತಾರಾಮಯ್ಯ**
ಸಂಸ್ಥಾಪಕರು
**ಡಾ. ಆರ್. ಲಕ್ಷ್ಮೀನಾರಾಯಣ**
ಗೌರವಾಧ್ಯಕ್ಷರು

**ಪದಾಧಿಕಾರಿಗಳು**
- ಅಧ್ಯಕ್ಷ
  **ಡಾ. ಬೈರಮಂಗಲ ರಾಮೇಗೌಡ**
  ೯೩೪೧೨೫೮೧೪೨
- ಗೌರವ ಕಾರ್ಯದರ್ಶಿ
  **ಡಾ. ಶಾಂತರಾಜು**
  ೯೯೮೦೪೮೧೪೮೪
- ಗೌರವ ಕೋಶಾಧಿಕಾರಿ
  **ಚಂದ್ರಶೇಖರ ನಾದೂರು**
  ೯೯೪೫೦೦೪೮೪೬

**ಸಂರಕ್ಷರು**
**ಬಿ.ಎಸ್. ಗುರುಪ್ರಸಾದ್**
ಹಸ್ತಪ್ರತಿ ವಿಭಾಗ

**ಸಂಯೋಜಕರು**
**ಡಾ. ಶಾಂತರಾಜು**
ಎಂ.ವಿ.ಸೀ. ಸಂಶೋಧನಾ ಕೇಂದ್ರ

## ಸಂನುಡಿ

## ಬಿ.ಎಂ.ಶ್ರೀ. ಪ್ರತಿಷ್ಠಾನದ ಸಂಸ್ಥಾಪಕರ ದಿನಾಚರಣೆಯ ಹಾರ್ದಿಕ ಶುಭಾಶಯಗಳು

ಬಿ.ಎಂ.ಶ್ರೀ. ಅವರ ಅಚ್ಚುಮೆಚ್ಚಿನ ಶಿಷ್ಯರಲ್ಲಿ ಒಬ್ಬರಾದ ಪ್ರೊ. ಎಂ.ವಿ. ಸೀತಾರಾಮಯ್ಯ ಅವರ ಹೆಸರು ಚಿರಂಜೀವಿಯಾಗಿರಲು ಈ ಸಂಸ್ಥೆಯೂ ಮುಂಚೂಣಿಯಲ್ಲಿ ಗುರುತಿಸಲ್ಪಟ್ಟಿದೆ. ಎಂ.ವಿ.ಸೀ. ಅವರು ಅಂದು ನೆಟ್ಟ ಆ ಸಸಿ, ಸದಸ್ಯರ, ಕಾರ್ಯಕಾರಿ ಮಂಡಳಿ ಸದಸ್ಯರ, ಗೌರವಾಧ್ಯಕ್ಷರುಗಳ, ಅಧ್ಯಕ್ಷರುಗಳ ಹಾಗೂ ಆತ್ಮೀಯ ಬಂಧು ಬಳಗದ ಸಂತೋಷದ ಸಹಕಾರದಿಂದ ಈಗ ಹೆಮ್ಮರವಾಗಿ ಬೆಳೆದುನಿಂತು ಕನ್ನಡಿಗರಿಗೆ ತಂಪು ನೆರಳನ್ನೂ, ಹೂಗಳ ಘಮವನ್ನೂ, ಹಣ್ಣಿನ ಸವಿಯನ್ನೂ ನೀಡುತ್ತಾ ಕನ್ನಡದ ಜೊತೆಗೆ ತತ್ಸಂಬಂಧಪಟ್ಟ ಹಸ್ತಪ್ರತಿಗಳ ಉಳಿಕೆ, ಗಳಿಕೆ, ಬೆಳವಣಿಗೆ ಜೊತೆಗೆ ಹೆಗ್ಗಳಿಕೆ ಪಡೆಯುತ್ತಾ ವಿರಾಜಮಾನವಾಗಿ ನಿಂತಿದೆ. ದಿ. ಎಂ.ವಿ.ಸೀ. ಅವರ ಮುಂದಾಲೋಚನೆಯ ದಿಟ್ಟ ಹೆಜ್ಜೆ ಶ್ಲಾಘನೀಯ. ಸಂಸ್ಥೆ ಬೆಳೆದಂತೆ, ಸಂಶೋಧನಾ ವಿಭಾಗಕ್ಕೆ ಒತ್ತು ಕೊಟ್ಟು ಈಗ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಮನ್ನಣೆ ಪಡೆದು ಗರಿಷ್ಠ ಸಂಖ್ಯೆಯ ಹದಿನೈದು ವಿದ್ಯಾರ್ಥಿಗಳು ಪಿಎಚ್.ಡಿ. ಪದವಿಗೆ ವ್ಯಾಸಂಗ ಮಾಡುತ್ತಿರುವುದು ಇಲ್ಲಿನ ಗುಣಮಟ್ಟದ ದ್ಯೋತಕ.

ಹಳಗನ್ನಡ ರಸಗ್ರಹಣ ಕಾರ್ಯಕ್ರಮವಂತೂ ವರುಷ ವರುಷ ಬೆಳೆದಂತೆ ಹರುಷವನ್ನು ಹರಡುತ್ತಿದೆ. ಎಲ್ಲಾ ವಯಸ್ಸಿನ, ಎಲ್ಲಾ ಪ್ರಕಾರಗಳ, ವಿವಿಧ ಅಭಿರುಚಿಯ ಆಸಕ್ತರು ವಿದ್ಯಾರ್ಥಿಗಳಾಗಿ ಬಂದು ಸೇರುತ್ತಿರುವುದು ಬಿ.ಎಂ.ಶ್ರೀ. ಪ್ರತಿಷ್ಠಾನದ ಅತ್ಯುತ್ತಮ ಆದರ್ಶದ, ಕಾರ್ಯಕ್ಷಮತೆಯನ್ನು ಬಿಂಬಿಸುತ್ತದೆ.

ಈ ಎಲ್ಲಾ ಅವಿಸ್ಮರಣೀಯ ಆಗುಹೋಗುಗಳಿಗೆ ಆತ್ಮೀಯ ದಾನಿಗಳು, ವಿದ್ವಾಂಸರಾದ ಉಪನ್ಯಾಸಕರುಗಳು, ಕನ್ನಡ ಪ್ರೇಮಿಗಳು, ಸರಕಾರ, ಅರೆಸರಕಾರಿ ಸಂಸ್ಥೆಗಳು ಹಾಗೂ ನಮ್ಮ ಸಿಬ್ಬಂದಿವರ್ಗ ಕಾರಣರಾಗಿರುತ್ತಾರೆ.

ಎಂ.ವಿ.ಸೀ. ಅವರ ಕನಸು ನನಸಾಗುತ್ತಿರುವ ಈ ಶುಭಗಳಿಗೆಯಲ್ಲಿ ಬಿ.ಎಂ.ಶ್ರೀ. ಪ್ರತಿಷ್ಠಾನವು ಎಂ.ವಿ.ಸೀ. ಅವರ ಹಾಗೂ ಬಿ.ಎಂ.ಶ್ರೀ. ಅವರ ಕುಟುಂಬದ ಎಲ್ಲ ಸದಸ್ಯರುಗಳಿಗೂ ನಮನಗಳನ್ನು ಸಲ್ಲಿಸುತ್ತದೆ.

ಕನ್ನಡದ ಏಳಿಗೆಗೆ, ಬಿ.ಎಂ.ಶ್ರೀ. ಪ್ರತಿಷ್ಠಾನದ ನಡಿಗೆ.

ಏಳ್ ಕನ್ನಡ, ಬಾಳ್ ಕನ್ನಡ.

**ಡಾ. ಬೆಳವಾಡಿ ಪ್ರಭಾಕರ್**
ಸಂಪಾದಕರು

## ದಿನಾಂಕ ೧೬/೦೯/೨೦೨೫ ಮಂಗಳವಾರ ಸಂಜೆ 'ಸಂಸ್ಥಾಪಕರ ದಿನಾಚರಣೆ' ಮತ್ತು 'ಶ್ರೀಮತಿ ಸಾವಿತ್ರಮ್ಮ ಪ್ರೊ. ಎಂ.ವಿ. ಸೀತಾರಾಮಯ್ಯ ಸಾಂಸ್ಕೃತಿಕ ಸಂಘಟಕ ಪ್ರಶಸ್ತಿ' ಪ್ರದಾನ ಕಾರ್ಯಕ್ರಮ ನಡೆಯಿತು.



ರಂಗಕರ್ಮಿ, ಸಾಂಸ್ಕೃತಿಕ ಸಂಘಟಕರಾದ ಶ್ರೀ ಶ್ರೀನಿವಾಸ ಜಿ. ಕಪ್ಪಣ್ಣ ಅವರಿಗೆ 'ಶ್ರೀಮತಿ ಸಾವಿತ್ರಮ್ಮ ಪ್ರೊ. ಎಂ.ವಿ. ಸೀತಾರಾಮಯ್ಯ ಸಾಂಸ್ಕೃತಿಕ ಸಂಘಟಕ ಪ್ರಶಸ್ತಿ'ಯನ್ನು ಪ್ರದಾನ ಮಾಡಲಾಯಿತು.

ಲೇಖಕರು, ನಿವೃತ್ತ ಅಭಿವೃದ್ಧಿ ಆಯುಕ್ತರು, ರಾಜ್ಯ ಸರಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಶ್ರೀ ಚಿರಂಜೀವಿ ಸಿಂಘ್ ಅವರು ಪ್ರಶಸ್ತಿ ಪ್ರದಾನ ಮಾಡಿದರು.

ಎಂ.ವಿ.ಸೀ. ಜೀವನ, ಸಾಧನೆ ಕುರಿತು ಬಿ.ಎಂ.ಶ್ರೀ. ಪ್ರತಿಷ್ಠಾನದ ಗೌರವಾಧ್ಯಕ್ಷರಾದ ಡಾ. ಆರ್. ಲಕ್ಷ್ಮೀನಾರಾಯಣ ಅವರು ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ. ಬೈರಮಂಗಲ ರಾಮೇಗೌಡ ಅವರು ವಹಿಸಿದ್ದರು.

ಬಿ.ಎಂ.ಶ್ರೀ. ಪ್ರತಿಷ್ಠಾನದ ಹಸ್ತಪ್ರತಿ ವಿಭಾಗದ ಸಂರಕ್ಷಕರಾದ ಶ್ರೀ ಬಿ.ಎಸ್.ಗುರುಪ್ರಸಾದ್ ಅವರು 'ಸಂಸ್ಥಾಪಕರ ದಿನಾಚರಣೆ'ಯ ಮತ್ತು 'ಶ್ರೀಮತಿ ಸಾವಿತ್ರಮ್ಮ ಪ್ರೊ. ಎಂ.ವಿ. ಸೀತಾರಾಮಯ್ಯ ಸಾಂಸ್ಕೃತಿಕ ಸಂಘಟಕ ಪ್ರಶಸ್ತಿ'ಯ ಬಗ್ಗೆ ವಿವರವಾಗಿ ಸಭೆಗೆ ಪರಿಚಯಿಸಿದರು. ಈ ದಿಶೆಯಲ್ಲಿ ಪ್ರೊ. ಎಂ.ವಿ.ಸೀ. ಅವರ ನಾಲ್ವರು ಪುತ್ರರ ಕಾರ್ಯವನ್ನು ಮೆಚ್ಚಿ ಅವರಿಗೆ ವಂದನೆಗಳನ್ನು ಸಲ್ಲಿಸಿದರು.

ಶ್ರೀಮತಿ ಸಾವಿತ್ರಮ್ಮ ಮತ್ತು ಪ್ರೊ. ಎಂ.ವಿ. ಸೀತಾರಾಮಯ್ಯ ದಂಪತಿಗಳ ಭಾವಚಿತ್ರಕ್ಕೆ ಗಣ್ಯರು ಹಾಗೂ ಕುಟುಂಬವರ್ಗದವರು ಪುಷ್ಪನಮನ ಸಲ್ಲಿಸಿದರು.

ಶ್ರೀ ಮಾರುತಿ ರಾಮ್ ಅವರು ಬಿ.ಎಂ.ಶ್ರೀ. ವಿರಚಿತ 'ಕರುಣಾಳು ಬಾ ಬೆಳಕೆ' ಗೀತೆಯನ್ನು ಪ್ರಾರ್ಥನೆಯ ರೂಪದಲ್ಲಿ



ಸುಶ್ರಾವ್ಯವಾಗಿ ಹಾಡಿದರು.

ಬಿ.ಎಂ.ಶ್ರೀ. ಪ್ರತಿಷ್ಠಾನದ ಗೌರವ ಕಾರ್ಯದರ್ಶಿಗಳಾದ ಡಾ. ಶಾಂತರಾಜು ಅವರು ವೇದಿಕೆಯ ಮೇಲಿನ ಗಣ್ಯರನ್ನು, ಕಾರ್ಯಕಾರಿ ಸಮಿತಿ ಸದಸ್ಯರನ್ನು, ಎಂ.ವಿ.ಸೀ. ಅವರ ಕುಟುಂಬದ ಸದಸ್ಯರನ್ನು, ಸಭಾಂಗಣದಲ್ಲಿ ನೆರೆದಿರುವ ಹಾಗೂ ಅಂತರ್ಜಾಲದ ವೀಕ್ಷಕರೆಲ್ಲರನ್ನು ಕಾರ್ಯಕ್ರಮಕ್ಕೆ ಆತ್ಮೀಯವಾಗಿ ಸ್ವಾಗತಿಸಿದರು. ನಂತರ ವೇದಿಕೆಯ ಗಣ್ಯ ಅತಿಥಿಗಳೆಲ್ಲರ ಕಿರುಪರಿಚಯ ಮಾಡಿಕೊಟ್ಟರು.



ಬಿ.ಎಂ.ಶ್ರೀ. ಪ್ರತಿಷ್ಠಾನದ ಗೌರವ ಕೋಶಾಧಿಕಾರಿಗಳಾದ ಪ್ರೊ. ಚಂದ್ರಶೇಖರ ನಾದೂರು ಅವರು ಪ್ರಶಸ್ತಿ ಪತ್ರವನ್ನು ಓದಿದರು.

ಶ್ರೀ ಶ್ರೀನಿವಾಸ ಜಿ. ಕಪ್ಪಣ್ಣ ಅವರಿಗೆ 'ಶ್ರೀಮತಿ ಸಾವಿತ್ರಮ್ಮ ಪ್ರೊ. ಎಂ.ವಿ. ಸೀತಾರಾಮಯ್ಯ ಸಾಂಸ್ಕೃತಿಕ ಸಂಘಟಕ ಪ್ರಶಸ್ತಿ'ಯನ್ನು ಮುಖ್ಯ ಅತಿಥಿಗಳಾದ ಶ್ರೀ ಚಿರಂಜೀವಿ ಸಿಂಘ್ ಅವರು ಪ್ರದಾನ ಮಾಡಿದರು. ಬಿ.ಎಂ.ಶ್ರೀ. ಪ್ರತಿಷ್ಠಾನದ ಗೌರವಾಧ್ಯಕ್ಷರಾದ ಡಾ. ಆರ್. ಲಕ್ಷ್ಮೀನಾರಾಯಣ, ಬಿ.ಎಂ.ಶ್ರೀ. ಪ್ರತಿಷ್ಠಾನದ ಅಧ್ಯಕ್ಷರಾದ ಡಾ. ಬೈರಮಂಗಲ ರಾಮೇಗೌಡ ಹಾಗೂ ಬಿ.ಎಂ.ಶ್ರೀ. ಪ್ರತಿಷ್ಠಾನದ ಗೌರವ ಕಾರ್ಯದರ್ಶಿಗಳಾದ



ಡಾ. ಶಾಂತರಾಜು ಅವರು ಕೈಗೂಡಿಸಿದರು.

ಪುರಸ್ಕಾರ ಪ್ರದಾನ ಮಾಡಿ ಮಾತನಾಡುತ್ತಾ, ಮುಖ್ಯ ಅತಿಥಿ ಚಿರಂಜೀವಿ ಸಿಂಘ್ ಅವರು ತಮಗೆ ಆದ ಆನಂದವನ್ನು ಹಂಚಿಕೊಂಡರು. ಪ್ರಶಸ್ತಿ ಸ್ವೀಕರಿಸಿದ ಶ್ರೀ ಶ್ರೀನಿವಾಸ ಕಪ್ಪಣ್ಣ ಅವರ ಉತ್ಕೃಷ್ಟ ಸಾಧನೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ, ಅವರನ್ನು ಅಭಿನಂದಿಸಿದರು. ನಾನು ಸರಕಾರದ ಬೇರೆಬೇರೆ ಇಲಾಖೆಗಳ ಕಾರ್ಯದರ್ಶಿ ಆಗಿದ್ದಾಗ, ಕಪ್ಪಣ್ಣ ಅವರು ಆಗಾಗ ಬಂದು ತಾವು ಏರ್ಪಡಿಸುವ ಕಾರ್ಯಕ್ರಮದ ಬಗ್ಗೆ ಒಂದು ಸಮರ್ಪಕವಾದ ಚಿತ್ರಣವನ್ನು ಬಹಳ ಅಚ್ಚುಕಟ್ಟಾಗಿ ಕೊಡುತ್ತಿದ್ದರು. ಅವರು ನಡೆಸುತ್ತಿದ್ದ ಪ್ರತಿಯೊಂದು ಕಾರ್ಯಕ್ರಮಕ್ಕೆ ಬಂದವರಲ್ಲಿ ನಮ್ಮ ರಾಜ್ಯದವರಲ್ಲದೇ, ದೇಶದ ಬೇರೆಬೇರೆ ರಾಜ್ಯದವರು ಸಹ ನಮ್ಮ ಮುಂದೆ ಅವರ ಸಂಘಟನಾ ಚಾತುರ್ಯತೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದರು. ನಾನು ಪರರಾಜ್ಯಗಳಿಗೆ ಹೋದಾಗ, ಸಾಹಿತ್ಯ ಮತ್ತು ಸಂಘಟನೆಯ ಮಾತು ಬಂದಾಗ, ಅನೇಕ ದಿಗ್ಗಜರು ಹೇಳುತ್ತಿದ್ದರು, "ನಿಮ್ಮ ಕರ್ನಾಟಕ ರಾಜ್ಯದಲ್ಲಿ ಕೇವಲ ಅನಂತಮೂರ್ತಿ ಮತ್ತು ಗಿರೀಶ್ ಕಾರ್ನಾಡ್ ಅಷ್ಟೇ ಅಲ್ಲ, ಮತ್ತೊಬ್ಬ ಧೀಮಂತ ವ್ಯಕ್ತಿ ಶ್ರೀನಿವಾಸ ಕಪ್ಪಣ್ಣ ಅನ್ನುವವರೂ ಇದ್ದಾರೆ, ಇದಕ್ಕಿಂತ ಇನ್ನೇನು ಬೇಕು".

ಇಂದು ಬಿ.ಎಂ.ಶ್ರೀ. ಪ್ರತಿಷ್ಠಾನ ನೀಡಿರುವ ಈ ಪ್ರಶಸ್ತಿಗೆ ಸಂಪೂರ್ಣ ಯೋಗ್ಯವಾದ ವ್ಯಕ್ತಿ ಶ್ರೀನಿವಾಸ ಕಪ್ಪಣ್ಣ ಎನ್ನುವುದರಲ್ಲಿ



ಎರಡು ಮಾತಿಲ್ಲ. ಈ ಸಂಸ್ಥೆಯ ಸ್ಥಾಪಕರಾದ ಪ್ರೊ. ಎಂ.ವಿ.ಸೀ. ಅವರು ಮಾಡಿರುವ ಕಾರ್ಯ ಸದಾ ನೆನಪಿನಲ್ಲಿ ಇಡುವಂತಹುದು ಅನ್ನುತ್ತಾ, ತಮಗೆ ಈ ಸಮಾರಂಭದಲ್ಲಿ ಭಾಗವಹಿಸಿ ಅತ್ಯಂತ ಸಂತೋಷವಾಗಿದೆ ಎಂದರು.

ಡಾ. ಆರ್. ಲಕ್ಷ್ಮೀನಾರಾಯಣ ಅವರು ಪ್ರೊ. ಎಂ.ವಿ.ಸೀ. ಅವರ ಜೀವನ ಮತ್ತು ಸಾಧನೆಯ ಬಗ್ಗೆ ಸವಿಸ್ತಾರವಾಗಿ ಸಭೆಗೆ ತಿಳಿಸಿದರು.

ನಂತರ ಪ್ರಶಸ್ತಿ ಪುರಸ್ಕೃತರಾದ ಶ್ರೀ ಶ್ರೀನಿವಾಸ ಕಪ್ಪಣ್ಣ ಅವರು "ಬಿ.ಎಂ.ಶ್ರೀ. ಪ್ರತಿಷ್ಠಾನವು 'ಶ್ರೀಮತಿ ಸಾವಿತ್ರಮ್ಮ ಪ್ರೊ. ಎಂ.ವಿ. ಸೀತಾರಾಮಯ್ಯ ಸಾಂಸ್ಕೃತಿಕ ಸಂಘಟಕ ಪ್ರಶಸ್ತಿ'ಯನ್ನು ನನಗೆ ನೀಡಿ ಗೌರವಿಸಿದೆ. ಇದಕ್ಕಿಂತ ಹೆಚ್ಚಿನ ಸಂತೋಷ ಇನ್ನೇನಿದೆ?" ಎಂದರು. ಮುಂದುವರೆದು ಕಲಾಕ್ಷೇತ್ರ ಕೆಲಸಗಳಲ್ಲಿ ಮತ್ತು ಸಂಘಟಕನಾಗಿ ತಮ್ಮ ಕಳೆದ ಅನೇಕ ವರ್ಷಗಳ ಅನುಭವಗಳನ್ನು ಸ್ವಾರಸ್ಯಕರವಾಗಿ ಹಂಚಿಕೊಂಡರು.

ನಂತರ ಡಾ. ಬೈರಮಂಗಲ ರಾಮೇಗೌಡ ಅವರು ಅಧ್ಯಕ್ಷ ಭಾಷಣ ಮಾಡಿದರು. ಸರಕಾರವೇ ಆಗಲಿ, ಯಾವುದೇ ಸಂಸ್ಥೆಯೇ ಆಗಲಿ ನಮಗೆ ಒಂದು ಜವಾಬ್ದಾರಿಯನ್ನು ಕೊಟ್ಟಾಗ ಅದನ್ನು ಹೇಗೆ ಸಮರ್ಪಕವಾಗಿ ನಿರ್ವಹಿಸಿ ಗೌರವವನ್ನು ತರಬೇಕು ಎಂಬುದನ್ನು ತಿಳಿಯಬೇಕಾದರೆ, ಶ್ರೀ ಶ್ರೀನಿವಾಸ ಕಪ್ಪಣ್ಣ ಅವರ ಕಾರ್ಯಕ್ಷಮತೆಯನ್ನು ನೋಡಿದರೆ ಸಾಕು ಎಂದರು. ನಮ್ಮ ದೇಶದಲ್ಲಿ ಅಷ್ಟೇ ಅಲ್ಲದೇ, ಪರದೇಶಗಳಲ್ಲೂ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿ ಅಲ್ಲಿರುವವರಿಂದ ಜಯಕಾರ ಪಡೆದಿದ್ದಾರೆ ಎಂದರೆ ಕಪ್ಪಣ್ಣನವರಿಗೆ ಕಪ್ಪಣ್ಣನವರೇ ಸಾಟಿ ಎಂದು ಕೊಂಡಾಡಿದರು.

ಕೊನೆಯಲ್ಲಿ ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ ಸಿಸಿರಾ ಅವರು ವಂದನಾರ್ಪಣೆ ಮಾಡಿದರು. ಗೌರವ ಕೋಶಾಧಿಕಾರಿ ಚಂದ್ರಶೇಖರ ನಾದೂರು ಅವರು ನಿರ್ವಹಣೆಯ ಜವಾಬ್ದಾರಿಯನ್ನು ಸಮರ್ಪಕವಾಗಿ ಮಾಡಿದರು.

## ಹಳಗನ್ನಡ ಕಾವ್ಯ ರಸಗ್ರಹಣ ತರಗತಿಗಳ ಪ್ರಾರಂಭ

೨೦೨೫ರ ನವೆಂಬರ್ ೦೪ ರಿಂದ ಹಳಗನ್ನಡ ಕಾವ್ಯ ರಸಗ್ರಹಣ ತರಗತಿಗಳನ್ನು ಪ್ರಾರಂಭಿಸಲಾಗುತ್ತದೆ. ಆಸಕ್ತರು ೩೧ ಅಕ್ಟೋಬರ್ ೨೦೨೫ರೊಳಗೆ ದೂರವಾಣಿಯ ಮೂಲಕ ಅಥವಾ ಇ–ಮೇಲ್ ಮೂಲಕ ನೋಂದಾಯಿಸಿಕೊಳ್ಳಬಹುದಾಗಿದೆ. ತರಗತಿಗಳು ಏಳು ತಿಂಗಳುಗಳ ಕಾಲ ಪ್ರತ್ಯಕ್ಷ ತರಗತಿಗಳಲ್ಲಿ ಮತ್ತು ಅಂತರ್ಜಾಲದಲ್ಲಿ ನಡೆಯುತ್ತವೆ (ಆನ್ಲೈನ್ ಮತ್ತು ಆಫ್ಲೈನ್), ಹಿರಿಯ ಕನ್ನಡ ವಿದ್ವಾಂಸರುಗಳಾದ ಡಾ. ಆರ್. ಲಕ್ಷ್ಮೀನಾರಾಯಣ, ಡಾ. ಕೆ.ಆರ್. ಗಣೇಶ, ಡಾ. ರಾಜಪ್ಪ ದಳವಾಯಿ, ಡಾ. ಸುರೇಶ ಪಾಟೀಲ, ಡಾ. ಎನ್.ಆರ್. ಲಲಿತಾಂಬ, ಡಾ. ಶ್ಯಾಮಲಾ ಪ್ರಕಾಶ್, ಪ್ರೊ. ಚಂದ್ರಶೇಖರ ನಾದೂರು, ಡಾ. ಬೈರಮಂಗಲ ರಾಮೇಗೌಡ, ಡಾ.ಶಾಂತರಾಜು ಬೋಧನೆ ಮಾಡುತ್ತಾರೆ.

**ತರಗತಿಗಳು : ಪ್ರತಿ ಮಂಗಳವಾರ ಮತ್ತು ಶುಕ್ರವಾರ ಸಂಜೆ ೫.೩೦ ರಿಂದ ೭.೦೦ರ ವರೆಗೆ ಪ್ರತಿಷ್ಠಾನದ ಭವನದಲ್ಲಿ ನಡೆಯುತ್ತವೆ.**

**ಸಂಪರ್ಕಿಸಿ :** ೯೯೭೨೮೮೨೦೨೭ ಅಥವಾ ಇ–ಮೇಲ್ bmsritrust@gmail.com

## ೨೭/೦೯/೨೦೨೫ ಶನಿವಾರದಂದು 'ಡಾ. ಕೆ.ರಾಜೇಶ್ವರಿ ದೊಡ್ಡರಂಗೇಗೌಡ ಸ್ಮಾರಕ ದತ್ತಿ' ಕಾರ್ಯಕ್ರಮ ನಡೆಯಿತು.






ಬೆಂಗಳೂರಿನ ಕ್ರೈಸ್ಟ್ ಕಾಲೇಜ್‌ನ ಸಹಪ್ರಾಧ್ಯಾಪಕರಾದ ಪ್ರೊ. ಸೋಮಶಂಕರ್ ಎನ್. ಅವರು 'ಪ್ರೊ. ದೊಡ್ಡರಂಗೇಗೌಡ ಅವರ ಕಾವ್ಯ – ಒಂದು ವಿವೇಚನೆ' ಎಂಬ ವಿಷಯದ ಮೇಲೆ ಉಪನ್ಯಾಸ ನೀಡಿದರು.

ರಾಜಾಜಿನಗರ, ಬೆಂಗಳೂರಿನ ಬಸವೇಶ್ವರ ಪದವಿ ಕಾಲೇಜ್‌ನ ಪ್ರಾಂಶುಪಾಲರಾದ ಡಾ. ಶೀಲಾದೇವೀ ಎಸ್. ಮಳೀಮಠ ಅವರು ಅಧ್ಯಕ್ಷತೆ ವಹಿಸಿದ್ದರು.

ಬಿ.ಎಂ.ಶ್ರೀ. ಪ್ರತಿಷ್ಠಾನದ ಹಸ್ತಪ್ರತಿ ವಿಭಾಗದ ಸಂರಕ್ಷಕರಾದ ಶ್ರೀ ಬಿ.ಎಸ್. ಗುರುಪ್ರಸಾದ್ ಅವರು ಈ ದತ್ತಿಯ ಬಗ್ಗೆ ಹಿನ್ನೋಟವನ್ನು ಸಭಿಕರಿಗೆ ಪರಿಚಯಿಸಿದರು.

ಬಿ.ಎಂ.ಶ್ರೀ. ಪ್ರತಿಷ್ಠಾನದ ಗೌರವ ಕಾರ್ಯದರ್ಶಿಗಳಾದ ಡಾ. ಶಾಂತರಾಜು ಅವರು ವೇದಿಕೆಯ ಗಣ್ಯರನ್ನು, ಸಭೆಯಲ್ಲಿ ಹಾಜರಿದ್ದ ಹಾಗೂ ಅಂತರ್ಜಾಲದ ಎಲ್ಲಾ ಆಹ್ವಾನಿತರನ್ನು ಸ್ವಾಗತಿಸಿದರು. ವೇದಿಕೆಯ ಮೇಲೆ ಆಸೀನರಾಗಿದ್ದ ಪದ್ಮಶ್ರೀ ಪ್ರೊ. ದೊಡ್ಡರಂಗೇಗೌಡರು, ಇಂದಿನ ಉಪನ್ಯಾಸಕರಾದ ಪ್ರೊ. ಸೋಮಶಂಕರ್ ಎನ್. ಮತ್ತು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಡಾ. ಶೀಲಾದೇವಿ ಎಸ್. ಮಳೀಮಠ ಅವರ ಪರಿಚಯ ಮಾಡಿಸಿದರು.

ಪದ್ಮಶ್ರೀ. ಪ್ರೊ. ದೊಡ್ಡರಂಗೇಗೌಡರ ಧರ್ಮಪತ್ನಿಯಾಗಿದ್ದ ದಿ॥ ಡಾ. ಕೆ. ರಾಜೇಶ್ವರಿ ದೊಡ್ಡರಂಗೇಗೌಡ ಅವರ ಭಾವಚಿತ್ರಕ್ಕೆ ಪುಷ್ಪನಮನ ಮಾಡಲಾಯಿತು.

ನಂತರ ಸೋಮಶಂಕರ್ ಅವರು ಉಪನ್ಯಾಸ ಮಾಡುತ್ತಾ "ಗುರು ಹಾಗೂ ಶಿಷ್ಯನ ಬಗ್ಗೆ ಅರಿವು ಮೂಡಿಸುತ್ತಾ, ಪ್ರೊ. ದೊಡ್ಡರಂಗೇಗೌಡರು ತಮ್ಮ ಕಾವ್ಯಗಳಲ್ಲಿ ಸಮಾಜದ ಆಗುಹೋಗುಗಳ ಬಗ್ಗೆ ಬೆಳಕನ್ನು ಚೆಲ್ಲುತ್ತಾ, ಮತ್ತೊಂದು ಕಡೆ ಸಮಾಜಕ್ಕೂ ಮತ್ತು ಆಡಳಿತ ನಡೆಸುವವರಿಗೂ ಎಚ್ಚರಿಕೆಯ ಗಂಟೆಯನ್ನು ಬಾರಿಸುವುದನ್ನು ಕಾಣುತ್ತೇವೆ. ಹಳ್ಳಿಯ ಬಡ, ಮುಗ್ಧ ಜನರ ಮೇಲಿನ ದೌರ್ಜನ್ಯ, ಭೂಕಬಳಿಕೆ, ಶೋಷಣೆ ಹೀಗೆ ಸಮಾಜದಲ್ಲಿ ಭೂತಾಕಾರವಾಗಿ ಬೇರೂರಿವ ಪಿಡುಗುಗಳ ಬಗೆಗೆ ಬಹಳ ಮಾರ್ಮಿಕವಾಗಿ ಶಕ್ತಿಶಾಲಿಯಾದ ಪದಬಾಣಗಳನ್ನು ಬಿಟ್ಟಿರುವುದನ್ನು ಕಾಣುತ್ತೇವೆ. ಅವರ ಕಾವ್ಯಗಳು ಕೇವಲ ಸಾಹಿತ್ಯವಲ್ಲ, ಸಮಾಜಕ್ಕೆ ಚಾಟಿ ಬೀಸುವ ಕ್ರಾಂತಿಕಾರಿಯ ಜ್ವಾಲೆಗಳಾಗಿವೆ. ಮಾತು ಕೇವಲ ನುಡಿಗಳಾಗದೆ ಕಹಳೆ, ಪಾಂಚಜನ್ಯವಾಗಬೇಕು ಎಂದವರು ಪ್ರೊ. ದೊಡ್ಡರಂಗೇಗೌಡರು.

ಅವರು ಕಾವ್ಯಗಳಲ್ಲಿ ಪ್ರಮುಖವಾಗಿ ಗುರುತಿಸುವುದು ಸಮಾನತೆಯ ಸಮಾಜವನ್ನು ಎನ್ನುತ್ತಾ, ತಮಗೆ ಇಂತಹ ಉತ್ಥಾನ ವ್ಯಕ್ತಿಯ ಕಾವ್ಯದ ಬಗ್ಗೆ ಮಾತನಾಡಲು ಆಸ್ಪದ ಮಾಡಿಕೊಟ್ಟ ಬಿ.ಎಂ.ಶ್ರೀ. ಪ್ರತಿಷ್ಠಾನಕ್ಕೆ ಮತ್ತು ಪ್ರೊ. ದೊಡ್ಡರಂಗೇಗೌಡರ ಕುಟುಂಬಕ್ಕೆ ಧನ್ಯವಾದಗಳನ್ನು ಅರ್ಪಿಸಿದರು.

ಅಧ್ಯಕ್ಷೀಯ ಭಾಷಣ ಮಾಡುತ್ತಾ ಡಾ. ಶೀಲಾದೇವಿ ಎಸ್. ಮಳೀಮಠ ಅವರು ಮೊದಲಿಗೆ ಪ್ರೊ. ದೊಡ್ಡರಂಗೇಗೌಡ ಅವರ ವಿರಚಿತ 'ಹಕ್ಕಿಗಳು ಹಾಡ್ಯಾವೆ.. ನೋಡಿ ಕಲಿಯೋಣ' ಎನ್ನುವ ಧ್ವನಿಮುದ್ರಣವನ್ನು ಹಾಕಿ ಕೇಳಿಸಿದರು. ಬಹಳ ಹಿಂದೆಯೇ ನನ್ನ ಮೊದಲ ಕವನ ಇದೇ ಬಿ.ಎಂ.ಶ್ರೀ. ಪ್ರತಿಷ್ಠಾನದ ವೇದಿಕೆಯ ಮೇಲೆ ಬಿಡುಗಡೆಯಾದಾಗ, ಇದು ಉತ್ತಮ ಕಾವ್ಯಗಳಲ್ಲಿ ಒಂದು. ನೀವು ನಿಜವಾಗಿಯೂ ಕವಿಯಾಗಿದ್ದೀರಿ ಎಂದು ಬೆನ್ನು ತಟ್ಟಿದ ಪ್ರಥಮ ವ್ಯಕ್ತಿ ಈ ಮಹಾನ್ ಕವಿ ಪ್ರೊ. ದೊಡ್ಡರಂಗೇಗೌಡರು ಎಂದರು. ಡಾ. ಕೆ. ರಾಜೇಶ್ವರಿ ದೊಡ್ಡರಂಗೇಗೌಡ ಅವರು ಕೇವಲ ಒಬ್ಬ ಹೆಣ್ಣುಮಗಳಲ್ಲ. ನಾನು ಕಂಡ ಅತ್ಯಂತ ನಿಷ್ಠಾವಂತ ಮತ್ತು ಶ್ರದ್ಧಾವಂತ ಹಾಗೂ ಆದಮ್ಯ ಚೇತನದ ವ್ಯಕ್ತಿಯಾಗಿದ್ದವರು. ಅವರಿಗೆ ಪಾಠ ಮಾಡಲು 'ಕಾವ್ಯ ಮೀಮಾಂಸೆ' ಬಹಳ ಪ್ರಿಯವಾದ ವಿಷಯವಾಗಿತ್ತು. ಸ್ವತಃ ಅದ್ಭುತ ಕವಿಯಾಗಿದ್ದ ಆಕೆ, ತರಗತಿಗಳಲ್ಲಿ ಪಠ್ಯಕ್ರಮದಂತೆ ಪಾಠ ಮಾಡುವುದರ ಜೊತೆಗೆ, ಜೀವನದ ಅತಿಮುಖ್ಯವಾದ ತತ್ವಗಳನ್ನು ಅದರಲ್ಲೂ ಪ್ರೀತಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳಿಗೆ ಹೇಳುತ್ತಾ ಅವರ ಪ್ರೀತಿ, ಅಭಿಮಾನ ಗಿಟ್ಟಿಸಿಕೊಂಡಂತಹ ಉತ್ತಮ ಶಿಕ್ಷಕಿ ಎಂದು ಬಣ್ಣಿಸಿದರು. ಪ್ರೊ. ದೊಡ್ಡರಂಗೇಗೌಡರ ಕಾವ್ಯಗಳಲ್ಲಿ ನಾವು ಕಾಣುವುದು ಸತ್ವ ಮತ್ತು ತತ್ವ. ಈ ಅಂಶವನ್ನು ಉಪನ್ಯಾಸಕರಾದ ಪ್ರೊ. ಸೋಮಶಂಕರ್ ಎನ್. ಅವರು ಬಹಳ ಧನ್ಯತೆಯಿಂದ ನಮ್ಮ ಮುಂದೆ ಇಟ್ಟಿದ್ದಾರೆ.

ಪ್ರೊ. ದೊಡ್ಡರಂಗೇಗೌಡರು ತಮ್ಮ ಕಾವ್ಯಗಳಲ್ಲಿ ಭಾವವನ್ನು ತುಂಬಿ ಜನಪದ ಸೊಗಡನ್ನು ಸೇರಿಸಿ ಮನಮುಟ್ಟುವಂತೆ ಕಾವ್ಯಗಳ ರಚನೆ ಹೇಗಿರಬೇಕು ಎಂಬುದಕ್ಕೆ ಮಾದರಿಯಾಗಿದ್ದಾರೆ. ಅದರಲ್ಲೂ ನಗರ ಜನಪದ ಅವರ ಕಾವ್ಯಗಳಲ್ಲಿ ತುಂಬಿ ತುಳುಕಾಡಿದೆ ಎಂದರು. ಸಮಾಜದ ಮೌಲ್ಯಗಳನ್ನು ತಮ್ಮ ಕಾವ್ಯಗಳಲ್ಲಿ ಅತ್ಯಂತ ನವಿರಾಗಿ ಬಿಂಬಿಸಿದ ಕವಿ ಎಂದರೆ ಅದು ಪ್ರೊ. ದೊಡ್ಡರಂಗೇಗೌಡರು ಅನ್ನುತ್ತಾ ತಮ್ಮ ಮಾತುಗಳನ್ನು ಮುಗಿಸಿದರು.

ವಂದನಾರ್ಪಣೆಯ ನಂತರ ಭೋಜನದೊಡನೆ ಕಾರ್ಯಕ್ರಮ ಮುಕ್ತಾಯವಾಯಿತು.

## ದಿನಾಂಕ ೨೯/೦೯/೨೦೨೫ ಸೋಮವಾರದಂದು ಸಂಜೆ 'ಹೆಬ್ಬಗೋಡಿ ಗುಂಡಪ್ಪ – ಜಾನಿಕಮ್ಮ ದತ್ತಿ' ಆಶಯದಲ್ಲಿ 'ಸರಸ್ವತೀ ಪೂಜೆ ಮತ್ತು ಭಕ್ತಿಗೀತೆ ಗಾಯನ' ನಡೆಯಿತು.

ಭಕ್ತಿಗೀತೆ ಗಾಯನವನ್ನು ಶ್ರೀಮತಿ ರೇಖಾ ಅಯ್ಯಂಗಾರ್ ಮತ್ತು ತಂಡದವರು ನಡೆಸಿಕೊಟ್ಟರು.

'ವಕ್ರತುಂಡ ಮಹಾಕಾಯ' ಶ್ಲೋಕದೊಂದಿಗೆ ಭಕ್ತಿಗೀತೆ ಗಾಯನ ಪ್ರಾರಂಭವಾಯಿತು. ನಂತರ 'ರಮಾಸಮುದ್ರನ', 'ಜಯ ಜಯ ಮಂಗಳಗೌರಿ', 'ಜಗದೀಶ್ವರಿ ದುರ್ಗಾ ಮಾತಾ', 'ರಾಮ ನೀ ಸಮಾನರಾರೆವರು', 'ಪಲುಕೆ ಬಂಗಾರ ಮಾಯೆನಾ', ಹೀಗೆ ಅನೇಕ ಗೀತೆಗಳನ್ನು ಭಕ್ತಿಯಿಂದ ಹಾಡಿದರು. ಮೃದಂಗವಾದಕ ಶ್ರೀ ಗುರುಪ್ರಸಾದ್ ಮತ್ತು ವಯೋಲಿನ್‌ನಲ್ಲಿ ಶ್ರೀ ಮಧುಸುದನ್ ಅವರು ಪಕ್ಕವಾದ್ಯ ನುಡಿಸಿದರು.

ಸರಸ್ವತಿ ಪೂಜೆಯ ಸಂದರ್ಭದಲ್ಲಿ ಬಿ.ಎಂ.ಶ್ರೀ. ಪ್ರತಿಷ್ಠಾನದ ಹಸ್ತಪ್ರತಿಗಳಿಗೆ ಮತ್ತು ಪುಸ್ತಕಗಳಿಗೆ ಭಕ್ತಿಯಿಂದ ಪೂಜೆ ನೆರವೇರಿಸಿ, ಪ್ರಸಾದ ಹಂಚಲಾಯಿತು.





ಇದೇ ವೇಳೆಯಲ್ಲಿ ದಸರೆ ಪ್ರಯುಕ್ತ ಆಯುಧಪೂಜೆಯೂ ನಡೆಯಿತು. ಈ ಪೂಜೆಗೆ ಬಿ.ಎಂ.ಶ್ರೀ. ಪ್ರತಿಷ್ಠಾನದ ಸಿಬ್ಬಂದಿವರ್ಗ ಸಮರ್ಪಕವಾಗಿ ಆಣಿ ಮಾಡಿದ್ದರು.

ದತ್ತಿ ದಾನಿಗಳಾದ ಹಿರಿಯ ಸಾಹಿತಿ, ನಿವೃತ್ತ ಪ್ರಾಧ್ಯಾಪಕ ಹಾಗೂ ಬಿ.ಎಂ.ಶ್ರೀ.ಪ್ರತಿಷ್ಠಾನದ ಕಾರ್ಯಕಾರಿ ಸಮಿತಿ ಸದಸ್ಯರಾದ ಪ್ರೊ. ಜಿ. ಅಶ್ವತ್ಥನಾರಾಯಣ ಉಪಸ್ಥಿತರಿದ್ದರು.

## ದಿನಾಂಕ ೩೦/೦೯/೨೦೨೫ ರ ಮಂಗಳವಾರ ಸಂಜೆ 'ಶಂ.ಬಾ. ಜೋಶಿ ದತ್ತಿ'

ಕಾರ್ಯಕ್ರಮದಲ್ಲಿ 'ಶಂ.ಬಾ. ಜೋಶಿಯವರ ಸಾಹಿತ್ಯದಲ್ಲಿ ವೈಚಾರಿಕತೆ' ವಿಷಯ ಬಸವನಗುಡಿಯ ವಿಜಯ ಕಾಲೇಜ್‌ನ ಸಹಪ್ರಾಧ್ಯಾಪಕರಾದ ಪ್ರೊ. ಅರುಣ್ ಕುಮಾರ್ ವಿಚಾರಗಳನ್ನು ಮಂಡಿಸಿದರು.

ಬಿ.ಎಂ.ಶ್ರೀ. ಪ್ರತಿಷ್ಠಾನದ ಅಧ್ಯಕ್ಷರಾದ ಡಾ. ಬೈರಮಂಗಲ ರಾಮೇಗೌಡ ಅವರು ಅಧ್ಯಕ್ಷತೆ ವಹಿಸಿದ್ದರು.

ಬಿ.ಎಂ.ಶ್ರೀ. ಪ್ರತಿಷ್ಠಾನದ ಹಸ್ತಪ್ರತಿ ಸಂರಕ್ಷಕರಾದ ಶ್ರೀ ಬಿ.ಎಸ್. ಗುರುಪ್ರಸಾದ್ ಅವರು ದತ್ತಿಯ ಬಗ್ಗೆ ವಿವರಣೆ ನೀಡುತ್ತಾ, ಇದು ಇಪ್ಪತ್ತೆಂಟನೇ ವರ್ಷದ ದತ್ತಿ ಕಾರ್ಯಕ್ರಮ ಎಂದು ಹೆಮ್ಮೆಯಿಂದ ಹೇಳಿದರು.




ಬಿ.ಎಂ.ಶ್ರೀ. ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಡಾ. ಶಾಂತರಾಜು ಅವರು ವೇದಿಕೆಯ ಗಣ್ಯರನ್ನು, ಸಭಿಕರೆಲ್ಲರನ್ನೂ ಕಾರ್ಯಕ್ರಮಕ್ಕೆ ಆದರದಿಂದ ಸ್ವಾಗತಿಸಿ, ಉಪನ್ಯಾಸಕರಾದ ಪ್ರೊ. ಅರುಣ್ ಕುಮಾರ್ ಅವರ ಪರಿಚಯವನ್ನು ಮಾಡಿಕೊಟ್ಟರು.

ಉಪನ್ಯಾಸ ಮಾಡುತ್ತಾ ಪ್ರೊ. ಅರುಣ್ ಕುಮಾರ್ ಅವರು ಮೊಟ್ಟಮೊದಲಿಗೆ ಶಂ.ಬಾ. ಜೋಶಿಯವರು ಹೆಸರಾಂತ ಪ್ರಕಾಶಕರಾಗಿ ಗುರುತಿಸಿಕೊಂಡವರು. ಎರಡನೆಯದಾಗಿ ಕನ್ನಡ ಸಾಹಿತ್ಯ ಲೋಕಕ್ಕೆ ನೀಡಿದ ಗ್ರಂಥಾಲಯದಲ್ಲಿ ಅತ್ಯಮೂಲ್ಯ ಗ್ರಂಥಗಳನ್ನು ಅದರಲ್ಲಿ ಸಂಗ್ರಹಿಸಿದ್ದು, ಸಾಹಿತ್ಯ ಲೋಕದ ಎಲ್ಲಾ ಮಜಲುಗಳಲ್ಲೂ 'ಸೈ' ಅನಿಸಿಕೊಂಡಿದ್ದ ಅವರ ಕಾರ್ಯದಲ್ಲಿ ನನಗೆ ಧರ್ಮಸಂಶೋಧನೆಯಲ್ಲಿ ಅವರಿಗಿದ್ದ ಆಸಕ್ತಿ ಹೆಚ್ಚಿನ ಗಮನ ಸೆಳೆಯಿತು. ಅವರ ಲೇಖನಗಳಲ್ಲೂ ಇದೇ ಅಂಶವನ್ನು ಕಾಣಬಹುದು. ಈ ವಿಚಾರದಲ್ಲಿ ಅಂಧಾಭಿಮಾನ ಸಲ್ಲದು ಎಂದು ಎಚ್ಚರಿಕೆ ನೀಡಿದವರೂ ಅವರೇ. 'ನಿನಗೆ ನೀನು ಒಳ್ಳೆಯವನಾಗಬೇಕಾದರೆ ವಿಚಾರವಂತನಾಗು ಇಲ್ಲವೋ ಗುಲಾಮನಾಗಿಬಿಡುವೆ', ಎಂಬುದು ಅವರ ನಿಲುವು.

ಅವರಲ್ಲಿ ನಾವು ಕಾಣಬೇಕಾದ ಮತ್ತೊಂದು ಗುಣವೆಂದರೆ, ಆಳವಾಗಿ ಬೇರೂರಿದ್ದ 'ರಾಷ್ಟ್ರಾಭಿಮಾನ' ಎಂದರು. ಇವತ್ತಿನ ಉಪನ್ಯಾಸದ ಸ್ವರೂಪ, ಸಾಹಿತ್ಯ ಮತ್ತು ಸಂಶೋಧನೆಗಳಿಗೆ

ಹೊರತಾಗಿ ಶಂ.ಬಾ. ಜೋಶಿಯವರ ‘ವೈಜ್ಞಾನಿಕ ವೈಚಾರಿಕತೆಯ’ ಮೇಲೆ ಬೆಳಕು ಚೆಲ್ಲಿದ್ದು ಕುತೂಹಲಕಾರಿಯಲ್ಲದೆ ವಿಭಿನ್ನವಾಗಿ ಸಭಿಕರ ಮೆಚ್ಚುಗೆಗೆ ಪಾತ್ರವಾಯಿತು.

ಬೈರಮಂಗಲ ರಾಮೇಗೌಡ ಅವರು ಅಧ್ಯಕ್ಷೀಯ ಭಾಷಣ ಮಾಡುತ್ತಾ ಶಂ.ಬಾ. ಜೋಶಿಯವರದು ಅದ್ಭುತವಾದ ಸಾಧನೆ. ತಮ್ಮ ಜೀವನದ ಸುದೀರ್ಘ ೯೫ ವರ್ಷಗಳಲ್ಲಿ ಅರವತ್ತೊಂದು ವರ್ಷಗಳನ್ನು ಸಾಹಿತ್ಯ ಸಂಶೋಧನೆ ಸೇವೆಯಲ್ಲಿ ತೊಡಗಿಸಿಕೊಂಡಿದ್ದರು ಅನ್ನುವುದು ಅಸಾಮಾನ್ಯ ಸಂಗತಿ ಎಂದರು. ಈ ಸಮಯದಲ್ಲಿ ತಮ್ಮ ಸಂಶೋಧನಾ ಚಟುವಟಿಕೆಗಳಲ್ಲಿ ಮುಳುಗಿದಾಗ ಅವರು ಹೆಕ್ಕಿ ತೆಗೆದ ಅನೇಕ ವೈಚಾರಿಕ ಸಂಗತಿಗಳನ್ನು ತಮ್ಮ ಭಾಷಣಗಳ, ಲೇಖನಗಳ ಮತ್ತು ಪುಸ್ತಕ ಪ್ರಕಟಣೆಗಳ ಮೂಲಕ ಬಿಂಬಿಸಿ ಕನ್ನಡ ವಿಚಾರ ಸಾಹಿತ್ಯಕ್ಕೆ ಹಾದಿಯನ್ನು ನಿರ್ಮಿಸಿ, ಕನ್ನಡದಲ್ಲಿ ಸಾಹಿತ್ಯ ಚಿರಂಜೀವಿ ಆಗುವಂತೆ ಮಾಡಿದ ಮಹಾನ್ ಪುರುಷ ಶಂ.ಬಾ.ಜೋಶಿಯವರು ಎಂದರು. ಅವರ ಮತ್ತೊಂದು ಮೈಲುಗಲ್ಲು ಎಂದರೆ ‘ಕನ್ನಡ ಸಂಸ್ಕೃತಿಯ’ ಬಗೆಗೆ ಪ್ರಕಟಿಸಿದ ಪುಸ್ತಕಗಳು. ಇವು ಕನ್ನಡದ ಉಳಿವಿಗೆ ದಾರಿದೀಪವಾದುವು ಎಂದರು. ಕೇವಲ ಕನ್ನಡವನ್ನು ಪಠ್ಯದ ಭಾಗವನ್ನಾಗಿ ನೋಡದೆ ಕನ್ನಡ ಭಾಷೆಯಲ್ಲಿ ಪ್ರೀತಿ ಉಂಟುಮಾಡುವ ಪುಸ್ತಕಗಳು ಬರುವಂತೆ ಪೀಠಿಕೆ ಹಾಕಿದವರು ಶಂ.ಬಾ. ಜೋಶಿಯವರು ಎಂದು ಗುಣಗಾನ ಮಾಡುತ್ತಾ, ಇಂದಿನ ಉಪನ್ಯಾಸಕರು ತಮ್ಮ ಮಾತುಗಳಲ್ಲಿ, ಶಂ.ಬಾ. ಜೋಶಿಯವರ ಹಿಂದು ಧರ್ಮದ ನಿಲುವಿನ ಬಗೆಗೆ ಚೆನ್ನಾಗಿ ತಿಳಿಸಿದರು. ಭಾರತೀಯ ಮೌಲ್ಯಗಳನ್ನು ಅರಿತು ಹಿಂದು ಧರ್ಮದ ಪಾಲನೆ ಮಾಡಬೇಕು, ಅದನ್ನು ಬಿಟ್ಟು ರಾಜಕೀಯ ಸ್ವಾರ್ಥಕ್ಕಾಗಿ ತಮಗೆ ಅನುಕೂಲವಾಗುವಂತೆ ಅರ್ಥೈಸಿಕೊಂಡು ನೂರುಬಾರಿ ಸುಳ್ಳು ಹೇಳಿ ಅದನ್ನೇ ಸತ್ಯವೆಂದು ಬಿಂಬಿಸುವ ಇಂದಿನ ಮನೋಸ್ಥಿತಿ ಖಂಡನೀಯ ಎಂದರು. ಪ್ರೊ. ಅರುಣ್ ಕುಮಾರ್ ಅವರನ್ನು ಆತ್ಮ ವಿಮರ್ಶೆ ಮಾಡಿಕೊಳ್ಳುವ ರೀತಿಯಲ್ಲಿ ಮಾತನಾಡಿದ್ದಕ್ಕೆ ಅಭಿನಂದಿಸಿ ತಮ್ಮ ಮಾತುಗಳನ್ನು ಮುಗಿಸಿದರು.

ಡಾ. ಶಾಂತರಾಜು ಅವರ ವಂದನಾರ್ಪಣೆಯೊಂದಿಗೆ ದತ್ತಿ ಉಪನ್ಯಾಸ ಕಾರ್ಯಕ್ರಮ ಮುಕ್ತಾಯವಾಯಿತು.

## ಶಂ.ಬಾ. ಜೋಶಿ ದತ್ತಿ ನಿಧಿಗೆ ಹೆಚ್ಚುವರಿ ಮೂಲ ಧನ ಸೇರ್ಪಡೆ

ದತ್ತಿ ಸ್ಥಾಪಕರಲ್ಲಿ ಒಬ್ಬರಾದ ಶ್ರೀ ಎಸ್. ಶಿವಲಿಂಗಯ್ಯ ಅವರು ೧೦,೦೦೦/- ರೂಪಾಯಿಗಳನ್ನು ಮೂಲ ದತ್ತಿ ನಿಧಿಗೆ ಸೇರಿಸಲು ದಿನಾಂಕ ೩೦.೦೯.೨೦೨೫ ರಂದು ನೀಡಿರುತ್ತಾರೆ ಎಂದು ತಿಳಿಸಲು ಸಂತೋಷವಾಗುತ್ತದೆ. ಅವರಿಗೆ ಅಭಿನಂದನೆಗಳು.

## ಪ್ರಸ್ತುತ ತಿಂಗಳ ಅಂಗಳ

**೧೧.೧೦.೨೦೨೫ ಶನಿವಾರ ಸಂಜೆ ೫.೦೦ ಗಂಟೆಗೆ**
ಎಂ.ಎ. ರಾಮಾನುಜ ಅಯ್ಯಂಗಾರ್ ದತ್ತಿ ಉಪನ್ಯಾಸ
ವಿಷಯ: ನಾ. ಕಸ್ತೂರಿ ಅವರ ಸಾಹಿತ್ಯ
ವಿಷಯ ಮಂಡನೆ: ಡಾ. ಎಚ್.ಎಸ್. ಸತ್ಯನಾರಾಯಣ
ಉಪನ್ಯಾಸಕರು, ಸರ್ಕಾರಿ ಪದವಿಪೂರ್ವ ಕಾಲೇಜು, ಚಿಕ್ಕಮಗಳೂರು

**೧೨.೧೦.೨೦೨೫ ಭಾನುವಾರ ಬೆಳಗ್ಗೆ ೧೦.೩೦ ಗಂಟೆಗೆ**
ಶ್ರೀ ಕೆ. ಮೋಹನ್‌ದೇವ್ ಆಳ್ವ ಮತ್ತು ಡಾ. ಎಂ.ಕೆ. ಶೈಲಜಾ ಆಳ್ವ ಅವರು ಸ್ಥಾಪಿಸಿರುವ ಶ್ರೀ ಕೆ.ವಿ. ಶಂಕರಗೌಡ ಪ್ರಶಸ್ತಿ ಪ್ರದಾನ ಸಮಾರಂಭ
ಪ್ರಶಸ್ತಿ ಪುರಸ್ಕೃತರು: ಶ್ರೀ ಕೆ.ವಿ. ನಾಗರಾಜಮೂರ್ತಿ
ರಂಗಕರ್ಮಿ, ಅಧ್ಯಕ್ಷರು, ಕರ್ನಾಟಕ ನಾಟಕ ಅಕಾಡೆಮಿ
ಮುಖ್ಯ ಅತಿಥಿ: ಶ್ರೀ ರಾಣಾ ಸುನೀಲ್ ಕುಮಾರ್ ಸಿಂಗ್
ಸಿನಿಮಾ ನಿರ್ದೇಶಕರು, ರಂಗಭೂಮಿ ಕಲಾವಿದರು

**೧೪.೧೦.೨೦೨೫ ಮಂಗಳವಾರ ಸಂಜೆ ೫.೦೦ ಗಂಟೆಗೆ**
ಬೇಟೆರಾಯ ದೀಕ್ಷಿತ್, ಬಿ. ರಾಮಸ್ವಾಮಿ, ಎಸ್.ಶ್ರೀಕಂಠಯ್ಯ, ಎಚ್.ವಿ. ಸಾವಿತ್ರಮ್ಮ, ರಾಮಸ್ವಾಮಿ ಸಂಯುಕ್ತ ದತ್ತಿಗಳ ಆಶ್ರಯದಲ್ಲಿ ಉಪನ್ಯಾಸ
ವಿಷಯ: ಸಾಹಿತ್ಯ ಮತ್ತು ವೈದ್ಯಲೋಕ
ವಿಚಾರ ಮಂಡನೆ: ಡಾ. ಸಿ. ನಂದಿನಿ, ಸಾಹಿತಿಗಳು, ಪ್ರಾಧ್ಯಾಪಕರು, ರಾಜರಾಜೇಶ್ವರಿ ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು

**೧೬.೧೦.೨೦೨೫ ಗುರುವಾರ ಸಂಜೆ ೫.೦೦ ಗಂಟೆಗೆ**
ಶ್ರೀಮತಿ ಸುಶೀಲಾ ವಾಸುದೇವರಾವ್ ಮತ್ತು ಹಳದೀಪುರ ವಾಸುದೇವರಾವ್ ದತ್ತಿ
ವಿಷಯ: ಕಥನದ ಪ್ರೇರಣೆಗಳು
ವಿಚಾರ ಮಂಡನೆ: ಶ್ರೀ ಜಯಂತ ಕಾಯ್ಕಿಣಿ
ಸಾಹಿತಿಗಳು, ಚಲನಚಿತ್ರ ಗೀತರಚನೆಕಾರರು

**೧೯.೧೦.೨೦೨೫ ಭಾನುವಾರ ಬೆಳಗ್ಗೆ ೧೦.೦೦ ಗಂಟೆಗೆ**
ಶಾ. ಬಾಲುರಾವ್ ಅನುವಾದ ಪ್ರಶಸ್ತಿ ಮತ್ತು ಯುವಬರಹಗಾರ ಪ್ರಶಸ್ತಿ ಪ್ರದಾನ ಕಾರ್ಯಕ್ರಮ



# ಬಿ.ಎಂ.ಶ್ರೀಕಂಠಯ್ಯ

## ೯. ಭಾಷಣ ಮೀಮಾಂಸೆ

ಮುಂದುವರೆದ ಭಾಗ...

**ಡಾ. ರಾಮೇಗೌಡ (ರಾಗೌ)**

ಇದು ಭಾಷಣಕಾರನ ಕಲೆ ವಾಗ್ಮಿತೆಗೆ ಸಂಬಂಧಿಸಿದ್ದು; ಲಿಖಿತ ಸಂಕಥನ ಕೂಡ. ಹಾಗಾಗಿ ಇದೊಂದು ಆಡುಮಾತಿನ ಅಥವಾ ಲಿಖಿತರೂಪದ ವಾಗ್ಮಿತೆಯ ಕಲೆ ಎಂಬುದು 'ಶ್ರೀ'ಯವರ ಅಭಿಪ್ರಾಯ. ಮುಖ್ಯವಾಗಿ ಭಾಷೆಯನ್ನು ಪರಿಣಾಮಕಾರಿಯಾಗಿ ಬಳಸುವುದೇ ಇಲ್ಲಿನ ಗುರಿಯಾಗಿರುತ್ತದೆ ಎಂಬುದು ಅವರ ಅನಿಸಿಕೆ. ಆದರೆ ಭಾಷಣ 'ಸಾಹಿತ್ಯಿಕ ಅಭಿವ್ಯಕ್ತಿ ಮತ್ತು ಸಾಹಿತ್ಯಿಕ ರೂಪ'ದ ಕಲೆ ಎನ್ನುವುದು ಮಾತ್ರ ಸಂದಿಗ್ಧವಾಗುತ್ತದೆ. 'ಸಾಹಿತ್ಯಿಕ'ವಾಗಬೇಕೆಂಬ ಅವರ ಮಾತು 'ಭಾಷಣ'ವನ್ನು 'ಸಾಹಿತ್ಯ'ದ ವಲಯಕ್ಕೆ ತಂದುಕೊಳ್ಳುವ ಉದ್ದೇಶ 'ಶ್ರೀ'ಯವರಿಗೆ ಇದ್ದಂತೆ ತೋರುತ್ತದೆ. ಒಂದು ಪಕ್ಷ ಸಾಹಿತ್ಯಿಕ 'ಅಭಿವ್ಯಕ್ತಿ'ಯನ್ನು ಒಪ್ಪಿದರೂ, ಅದು ಸಾಹಿತ್ಯಿಕ ರೂಪಕ್ಕೆ ಸೇರಬೇಕೆಂಬುದನ್ನು ಒಪ್ಪಿಕೊಳ್ಳುವುದು ಕಷ್ಟ. ಇಷ್ಟಕ್ಕೂ 'ಭಾಷಣ'ವನ್ನು ಸಾಹಿತ್ಯಿಕ ರೂಪವೊಂದಾಗಿ ಯಾರೂ ಈವರೆಗೆ ಪರಿಗಣಿಸಿದುದಿಲ್ಲ; ಜೊತೆಗೆ, ಭಾಷಣವನ್ನು 'ಸಾಹಿತ್ಯ'ವಾಗಿರಲೇಬೇಕೆಂದು ಒತ್ತಾಯ ಮಾಡುವುದು ಸರಿಯಲ್ಲ, ಭಾಷಣಕಲೆಯನ್ನೇನಾದರೂ ಸಾಹಿತ್ಯಿಕವಾಗಬೇಕೆಂದರೆ, ಆಗ ಭಾಷಣ ಮೀಮಾಂಸೆ ಮತ್ತು ಸಾಹಿತ್ಯ ಮೀಮಾಂಸೆಯ ನಡುವಣ ವ್ಯತ್ಯಾಸ ಉಳಿಯುವುದಿಲ್ಲ; 'ಶ್ರೀ'ಯವರ ನಿಲುವು ಇದೇ ಆಗಿರಬಹುದು.

'ಶ್ರೀ'ಯವರಿಗೆ ಬರೆಹ ಭಾಷಣದ ಕಡೆಗೆ ಹೆಚ್ಚಿನ ಒಲವು ಇರುವುದರಿಂದಾಗಿ, ತಮಗೆ ತಾವೇ ಕೆಲವು ನಿಯಮಗಳನ್ನು ಸೇರಿಸಿಕೊಳ್ಳುತ್ತಾರೆ. ಐಕ್ಯತೆ, ಆಯ್ಕೆ, ಸುಸಂಬದ್ಧತೆ, ಪ್ರಮಾಣ, ಒತ್ತು ಮತ್ತು ವೈವಿಧ್ಯತೆಗಳೆಂದು ಇದನ್ನು ಅವರು ಗುರುತಿಸುತ್ತಾರೆ. ಅನಗತ್ಯ ವಿಷಯಗಳನ್ನು ಬಿಡುವುದು, ರಚನೆಯಲ್ಲಿ ಹೊಂದಾಣಿಕೆಯನ್ನು ತರುವುದು ಅಪೇಕ್ಷಣೀಯವೇ. ವಿಶೇಷ ಅಂಶಗಳನ್ನು ಗುರುತಿಸಿ ಅವನ್ನು ಕ್ರಮವಾಗಿ ಇಟ್ಟು ತಾರ್ಕಿಕ ಸಾಮರಸ್ಯವನ್ನು ಉಂಟುಮಾಡುವುದು ಕೂಡ ಉಪಾದೇಯವೇ. ಏಕತಾನತೆಯನ್ನು ಮುರಿಯಲು ಅಭಿವ್ಯಕ್ತಿಯಲ್ಲಿನ ವಿವಿಧತೆ ಮುಖ್ಯವಾಗುತ್ತದೆ; ಹಾಗೆಯೇ ಮುಖ್ಯವೆನಿಸುವ ಭಾವನೆಗಳ ಮೇಲೆ ವಿಶೇಷ ಒತ್ತು ಇಟ್ಟು ಮಾತಾಡುವುದು ಅಥವಾ ಬರೆಯುವುದು ಆಪ್ಯಾಯಮಾನವೆನಿಸುವುದು ಸಹಜ. ಆದರೆ 'ಶ್ರೀ'ಯವರು ಸೂಚಿಸುವ ಈ ಲಕ್ಷಣಗಳು 'ಭಾಷಣಕಲೆ'ಗೆ ಮಾತ್ರ ಸಿಮೀತವೆಂದು ಹೇಳಬೇಕಾಗಿಲ್ಲ; ಸೃಜನೇತರ ಬರೆವಣಿಗೆಗಳಲ್ಲೆಲ್ಲ ಸಾಮಾನ್ಯವೆಂದು ಪರಿಗಣಿಸಬೇಕು. ಇಂತಹ ಆದರ್ಶ ಬರೆವಣಿಗೆ ಅಥವಾ ಭಾಷಣವನ್ನು ಎಲ್ಲಿ ತರುವುದು? ಪ್ರತಿಭಾನ್ವಿತ ಬರೆಹಗಳಲ್ಲಿ ಸಾಮಾನ್ಯವಾಗಿ ಈ ಲಕ್ಷಣಗಳನ್ನು ಕಾಣಬಹುದು; 'ಶ್ರೀ'ಯವರ ಅಭಿಪ್ರಾಯವೂ ಇದೇ ಇರುವಂತೆ ತೋರುತ್ತದೆ. ಇಂತಹ ಬರೆವಣಿಗೆ/ಭಾಷಣವನ್ನು ಹೆಚ್ಚು ತಾಂತ್ರಿಕವಾಗದಂತೆ ನೋಡಿಕೊಳ್ಳುವ ಜವಾಬ್ದಾರಿ ಮಾತ್ರ ಲೇಖಕನಿಗೆ/ಭಾಷಣಕಾರನಿಗೆ ಇರಬೇಕಾಗುತ್ತದೆ. ಹೀಗೆ ಮಾಡುವಾಗ ಅತ್ಯಂತ ಪ್ರಮುಖ ಅಂಶಗಳು ಬಿಟ್ಟುಹೋಗದಂತೆ ಮತ್ತು ಸಾಹಿತ್ಯಕತೆಯಿಂದ ವಂಚಿತವಾಗದಂತೆ ಎಚ್ಚರವಹಿಸಬೇಕಾದ್ದೂ ಅವನ ಕರ್ತವ್ಯವಾಗಿರುತ್ತದೆ. ಮೊದಲೇ ಒಂದು ನಕ್ಷೆಯನ್ನು ತಯಾರಿಸಿಕೊಂಡಿದ್ದು, ಆರಂಭ, ಶಿಖರ ಮತ್ತು ಮುಕ್ತಾಯದ ಭಾಗಗಳು ಕ್ರಮಬದ್ಧವಾಗಿರುವಂತೆ ನೋಡಿಕೊಳ್ಳಬೇಕಲ್ಲದೆ, ಮುಖ್ಯ ವಿಷಯಗಳಾವುವೂ ತಪ್ಪಿಹೋಗದಂತೆ ನೋಡಿಕೊಳ್ಳುವ ಅಂಶವನ್ನು ಶ್ರೀಯವರು ಒತ್ತಿ ಹೇಳುವುದನ್ನು ಮರೆಯುವುದಿಲ್ಲ. ತೋರಿಕೆಯಾಗಿ ಇದು ಬರಬೇಕಾದ್ದಿಲ್ಲ, ಚೈತನ್ಯವಾಗಿ ರೂಪುಗೊಳ್ಳಬೇಕೆಂಬ ಅವರ ಅಭಿಪ್ರಾಯ ಸರಿಯಾಗಿಯೇ ಇದೆ; ಏಕೆಂದರೆ ಕೃತಕತೆಯಿಂದ ಪಾರಾಗಬೇಕೆಂಬುದು ಇಲ್ಲಿನ ಸೂಕ್ಷ್ಮವಾಗಿದೆ.

ನಾವು ಹೇಳಬೇಕೆಂದಿರುವ ವಸ್ತುವಿಷಯ ಯಾವುದಿದೆ ಅದು ಎಲ್ಲಕ್ಕಿಂತ ಮುಖ್ಯವಾದುದು ಎಂಬುದರಲ್ಲಿ ಯಾವ ಅನುಮಾನವೂ ಇಲ್ಲ. ಇದನ್ನು ಚರ್ಚೆ, ಸಾದೃಶ್ಯ, ಅನ್ವಯ, ಕಾರ್ಯಕಾರಣ ಸಂಬಂಧದಲ್ಲಿ ಪ್ರತಿಪಾದಿಸಬೇಕೆಂಬುದು ಅದರ ನಿಲುವು, ಇವು ತುಲನೆ, ಉದಾಹರಣೆಗಳಿಂದ ತುಂಬಿಹೋಗಿರಬೇಕೆಂಬುದು ಅವರ ಒಲವು. ಬಿಡಿ ಇಡಿಯಲ್ಲಿ ಅಡಕಗೊಂಡು ಮಾತಿಗೆ ಅಥವಾ ಪ್ರಬಂಧಕ್ಕೆ ಶೋಭೆ ತರಬೇಕೆಂಬುದನ್ನು ಅಲ್ಲಗಳೆಯಬೇಕಾಗಿಲ್ಲ. ಆದರೆ ಹೀಗೆಯೇ ಇರುತ್ತದೆ ಎಂದು ಪ್ರತಿ ಸಂದರ್ಭದಲ್ಲೂ ನೀರಿಕ್ಷಿಸಲಾಗದು; ಏಕೆಂದರೆ ಎಷ್ಟೋ ಸರ್ತಿ ಸ್ವಂತ ಸ್ವತಂತ್ರ ವಿಚಾರಧಾರೆಯ ಮೇಲೆ ನಡೆದುಹೋಗಿರುತ್ತದೆ; ಅದು ನಮ್ಮ ಪೂರ್ವಭಾವಿ ಟಿಪ್ಪಣಿಯನ್ನು ಅನುಸರಿಸುತ್ತದೆ ಅಥವಾ ಉಲ್ಲಂಘಿಸಿ ಬೆಳೆವಣಿಗೆಯಾಗಿರುತ್ತದೆ. ಅದು ಘೋಷಿತ ಯಾಂತ್ರಿಕ ಮಾರ್ಗದಿಂದ ಪಾರಾಗಬೇಕಾದರೆ ಸೃಜನಶೀಲ ಮಾದರಿಯಾಗುವುದು ಅನಿರೀಕ್ಷಿತವಾದರೂ ಸ್ವೀಕಾರಾರ್ಹವಾದುದೆಂದು ಹೇಳಬೇಕಾಗುತ್ತದೆ. ಅದು ಕಲಾತ್ಮಕ ನೋಟಕ್ಕೆ ಬರಬೇಕಾದರೆ ಇಂತಹ ಮಾರ್ಗ ಮಾದರಿ ಅವಶ್ಯಕವೆಂದೇ ತೋರುತ್ತದೆ. ಇನ್ನು ಅವರು ಹೇಳುವ ವಾಕ್ಯದ ಸರಳ ಅಥವಾ ಸಂಕೀರ್ಣ ಮಾದರಿ ಆಯಾಯ ಲೇಖಕನ ಸ್ವಭಾವಕ್ಕೆ ಸಂಬಂಧಿಸಿದ್ದಾಗಿರುತ್ತದೆ; ಬರೆವಣಿಗೆಯಲ್ಲಿ ಹೇಗೋ ಇರಲಿ, ಭಾಷಣದಲ್ಲಿ ಸರಳ ಸ್ಪಷ್ಟತೆಯನ್ನು ಉಲ್ಲಂಘಿಸಬಾರದು.

ಶೈಲಿಯ ಬಗ್ಗೆ ವಿಶೇಷವಾಗಿ ಪ್ರಸ್ತಾಪಿಸಿರುವರು ಪದಗಳ ಆಯ್ಕೆ ಮತ್ತು ಬಳಕೆ ಕುರಿತು ಚರ್ಚಿಸಿದ್ದಾರೆ. ಅತ್ಯುತ್ತಮ ಪದಗಳ ಆಯ್ಕೆ ಮತ್ತು ಬಳಕೆ ಕುರಿತು ಚರ್ಚಿಸಿದ್ದಾರೆ. ಅತ್ಯುತ್ತಮ ಪದಗಳ ಜೋಡಣೆ ಮತ್ತು ಬಳಕೆ ಯಾವೊತ್ತೂ ಉತ್ತಮವಾದುದು ಎಂಬುದನ್ನು ತಿಳಿದಿರಬೇಕು. ಭಾಷಣದಲ್ಲಿ 'Poetic Diction' ಬೇಕೆ ಎಂಬುದರಲ್ಲಿ ಸಂಶಯವಿದೆ. ಅನೇಕ ಸರ್ತಿ 'ಶ್ರೀ'ಯವರ ಹೇಳಿಕೆಗಳು ಭಾಷಣ ಮತ್ತು ಕಾವ್ಯಗಳೆರಡಕ್ಕೂ ಅನ್ವಯವಾಗಿ

HONGANASU KANNADA MONTHLY NEWS LETTER, RNI No. KAR/KAN/2015/64049 REGISTERED
Post office Registration No. RNP/KA/BGS/2229/2021-2023 dt. 28-12-2020 Office of Posting: Bengaluru PSO, Bengaluru 560026
Price: Annual Subscription Rs. 20/-  Date of Publishing and Posting: 30-09-2025

ಬಿಡುವುದರಿಂದ ಸಮಸ್ಯೆ ಎದುರಾಗಿಬಿಡುತ್ತದೆ. ಭಾಷಣದಲ್ಲಿ ಕಾವ್ಯಾತ್ಮಕತೆಗಿಂತ ತಾರ್ಕಿಕತೆ ಹೆಚ್ಚು ಅಪೇಕ್ಷಣೀಯವೆಂದು ತೋರುವುದು ಸಹಜ. ಪ್ರತಿಯೊಬ್ಬರಿಗೂ ಶೈಲಿಯ ವೈಯಕ್ತಿಕತೆ ಇರುತ್ತದೆ ಎಂಬುದು ನಿಜ; ಆದರೆ ಈ ವೈಯಕ್ತಿಕತೆ ಭಾಷಣಕಾರ ಮತ್ತು ಕವಿಯಲ್ಲಿ ಒಂದೇ ಆಗಿರುತ್ತದೆ ಎಂದು ಹೇಳಲಾಗದು. ಇದನ್ನು 'ಶ್ರೀ'ಯವರು ಗುರುತಿಸಿದಂತೆ ತೋರುವುದಿಲ್ಲ. ಭಾಷೆಯನ್ನು ಸರಕಾಗಿ ಕಾಣುವುದರಲ್ಲಿ ತಪ್ಪಿಲ್ಲ; ಅದರೆ ಇದು ಭಾಷಣ ಮತ್ತು ಕಾವ್ಯದ ಶೈಲಿಯಲ್ಲಿ ವ್ಯವಹರಿಸುವುದು ಬೇರೆಯೇ ಆಗಿರುತ್ತದೆ. ಪದಗಳು ನಿರ್ದಿಷ್ಟ ಭಾವನೆಯ ಮೇಲೆ ಮುದ್ರೆಯೊತ್ತುವುದು ನಿಜವಾದರೂ, ಪದಗಳನ್ನು ಮೀರಿ ಭಾವನೆ ಬೆಳೆಯುವುದನ್ನು ನಾವು ಒಪ್ಪಲೇಬೇಕು. ಸಂಕ್ಷಿಪ್ತತೆ, ಸರಳತೆ, ಖಚಿತತೆ ಮತ್ತು ನುಡಿಗಟ್ಟಿನ ಹೊಸತನ ಕೇವಲ ಯಾಂತ್ರಿಕ ಎಂದು ಭಾವಿಸುವ ಹಾಗಿಲ್ಲ; ಏಕೆಂದರೆ, ಅವುಗಳ ಮೇಲೆ ಪ್ರತಿಭಾವಿಶೇಷದ ಕೃಪಾಕಟಾಕ್ಷ ಪ್ರಾಪ್ತವಾಯಿತೆಂದರೆ ಪಡೆಯುವ ಆಯಾಮವೇ ಬೇರೆಯಾಗಿರುತ್ತದೆ; ಇದು ಭಾಷಣ ಕಲೆಯಲ್ಲಿ ಹೆಚ್ಚು ಸಾಕ್ಷಾತ್ಕಾರವಾಗುವುದು. ಭಾಷೆ ಪದಗಳ ಮೂಲಕ ವ್ಯವಹರಿಸುವಾಗ ಮೂರ್ತರೂಪ ಮತ್ತು ಅಮೂರ್ತರೂಪಗಳಲ್ಲಿ ಅದು ಕಾಣಿಸಿಕೊಳ್ಳುವ ರೀತಿಯೇ ಬೇರೆಯಾಗಿರುತ್ತದೆ. ಅಂತಹ ಸಂದರ್ಭವನ್ನು ಅನುಭವ ಮತ್ತು ಆಲೋಚನೆ ನಿಯಂತ್ರಿಸುತ್ತಿರುತ್ತವೆ. ಈ ಪ್ರಕ್ರಿಯೆ ಭಾಷಣ ಮತ್ತು ಕಾವ್ಯಗಳಲ್ಲಿ ಒಂದೇ ರೀತಿಯಲ್ಲಿರುವುದಿಲ್ಲ. ಭಾಷಣದಲ್ಲಿ ವ್ಯಕ್ತವಾಗುವ ಕೌಶಲ ಪದಗಳ ಆಯ್ಕೆ, ಬಳಕೆಯನ್ನು ನಿರ್ದಿಷ್ಟ ರೀತಿಯಲ್ಲಿ ಹಿಡಿತದಲ್ಲಿರಿಸಿಕೊಂಡಿರುತ್ತದೆ ಎಂಬುದನ್ನು ಒಪ್ಪೋಣ. ರೂಪಕಾತ್ಮಕತೆ ಮತ್ತು ಪ್ರತಿಮಾತ್ಮಕತೆಗಳು ಪದಗಳ ಸಾಮಾನ್ಯ ಬಳಕೆಗಿಂತ ಭಿನ್ನವಾಗಿರುತ್ತವೆ. ಇದನ್ನು ಉಪಮೆ, ರೂಪಕ, ಅನ್ಯೋಕ್ತಿ, ವ್ಯಂಗ್ಯ ಇತ್ಯಾದಿ ಪ್ರಕಾರಗಳ ಮೂಲಕ ಭಾಷಣ ಶೈಲಿಯನ್ನು 'ಶ್ರೀ'ಯವರು ವಿವರಿಸಲು ಪ್ರಯತ್ನಿಸುತ್ತಾರೆ. ಇಂತಹ ವಿಷಯದಲ್ಲಿ ಅವರು ಭಾಷಣ ಮತ್ತು ಕಾವ್ಯ ಶೈಲಿಯನ್ನು ಬೇರ್ಪಡಿಸಿ ನೋಡಿದಂತೆ ತೋರುವುದಿಲ್ಲ; ಕಾವ್ಯ ಮೀಮಾಂಸೆಯ ಪರಿಭಾಷೆಯಲ್ಲಿಯೇ ಹೇಳುತ್ತಿದ್ದಾರೆ ಎನಿಸುತ್ತದೆ. ಮೂರ್ತಿ ಈ ಗುಣ ಪದಗಳ ಸಾಮಾನ್ಯ ಬಳಕೆಯಿಂದ ಬೇರೆಯಾಗಿರುವುದು ಮಾತ್ರವಲ್ಲದೆ, ಭಾವನೆಯನ್ನು ಅರ್ಥೈಸುವ ಮತ್ತು ಪರಿಣಾಮಕಾರಿಯಾಗಿರುವ ವಿಧಾನದಲ್ಲೂ ಭಿನ್ನ ಹಾದಿ ಅದರದು ಎಂಬುದನ್ನು 'ಶ್ರೀ'ಯವರು ಸ್ಪಷ್ಟಪಡಿಸುತ್ತಾರೆ. ಇದು ರಾಚನಿಕವಾದುದೇ ಹೊರತು, ಅಲಂಕಾರಿಕವಾದುದಲ್ಲ ಎಂಬುದನ್ನು ಅವರು ನಮ್ಮ ಗಮನಕ್ಕೆ ತರುತ್ತಾರೆ. ಹಾಗೆಂದ ಮಾತ್ರಕ್ಕೆ ಅಂತಹ ಬಳಕೆ ಅಲಂಕಾರಿಕವಾಗುವುದಿಲ್ಲ ಎಂದಲ್ಲ; ಸಮಯ ಸಂದರ್ಭಗಳಿಗೆ ಅನುಗುಣವಾಗಿ ಅದು ನಿರ್ಧರಿತವಾಗುತ್ತದೆ. ಭಾಷಣದಲ್ಲಿ ಕಾವ್ಯದ ಭಾವಮೌಲ್ಯಕ್ಕಿಂತ ಪ್ರಾಯೋಗಿಕಮೌಲ್ಯ ಅಥವಾ ಅನುಕಾರಣಮೌಲ್ಯ ಹೆಚ್ಚಾಗಿರುತ್ತದೆ ಎಂಬುದನ್ನು ಅವರು ಸ್ಪಷ್ಟಪಡಿಸಬೇಕಾಗಿತ್ತು. ಶೈಲಿಯ ಈ ಅಲಂಕಾರಿಕ ಅಭಿವ್ಯಕ್ತಿ ಶೈಲಿಯನ್ನು ವಿಶೇಷೀಕರಿಸುವ, ಸೌಂದರ್ಯವನ್ನು ಹೆಚ್ಚಿಸುವ ಮತ್ತು ಆನಂದಾನುಭವಕ್ಕೆ ಕಾರಣವಾಗುವಂಥದು; ಇದು ಕಾವ್ಯ ಮತ್ತು ಭಾಷಣಗಳೆರಡರಲ್ಲೂ ಸಮಾನವಾಗಿ ಕಂಡುಬರುವ ಗುಣವೆಂದು ಅವರು ಪ್ರತಿಪಾದಿಸುತ್ತಾರೆ. ಅನೇಕ ರೂಪಕಗಳು ಸಾಮಾನ್ಯ ಮಾತಿನಲ್ಲಿ ಸೇರಿಕೊಂಡಿರುವುದನ್ನು ವಿವರಿಸುತ್ತ 'Language has been called "Fossil poetry" ಎಂದು ಹೇಳುತ್ತಾರೆ. ಭಾಷೆಯ ಕಾವ್ಯಾತ್ಮಕತೆಯನ್ನು ಹೇಗೂ ಒಪ್ಪೋಣ, ಆದರೆ ರೂಪಕಗಳು ಕಾವ್ಯದಿಂದ ಬಳಕೆಯ ಮಿತಿಗೆ ಸೇರಿಕೊಂಡಿವೆಯೊ ಅಥವಾ ಬಳಕೆಯ ಮಾತಿನಲ್ಲಿದ್ದ ರೂಪಗಳು ಕಾವ್ಯದಲ್ಲಿ ಸೇರಿಕೊಂಡಿವೆಯೊ ನಿರ್ಧರಿಸುವವರು ಯಾರು? ಎರಡೂ ಸಾಧ್ಯತೆಗಳನ್ನು ಒಪ್ಪಿಕೊಂಡೇ 'ಶ್ರೀ'ಯವರ ಮಾತನ್ನು ಸ್ವೀಕರಿಸಬೇಕಾಗುತ್ತದೆ. ಕಾವ್ಯದಲ್ಲಿ 'ಸೂಚಿತ'ವಾಗುವ ಅಥವಾ 'ಧ್ವನಿತ'ವಾಗುವ ಶೈಲಿ ಭಾಷಣಕ್ಕೆ ಬೇಕೆ ಎಂಬುದನ್ನು ಮೊದಲಿಗೆ ನಿರ್ಧರಿಸಬೇಕು. ಏಕೆಂದರೆ 'ಸೂಚಿತ ಅಥವಾ ಧ್ವನ್ವಿತವಾಗುವ ವಿಚಾರಗಳನ್ನು ಭಾಷಣದಲ್ಲಿ ಮತ್ತೆ ವಿವರಿಸುವ ಅಗತ್ಯ ತಲೆದೋರುತ್ತದೆ. ಕಾವ್ಯದಲ್ಲಿ ಅದರ ಅಗತ್ಯವೇನೂ ಇರುವುದಿಲ್ಲ. (ಮುಂದುವರೆಯುವುದು)

**Printed & Published by :** BMSRI PRATISHTANA, B.M.Sri Pratishtana Road, 3rd Main, N.R. Colony, Bengaluru - 560004
Editor : **Dr. Belavadi K. Prabhakar**

ಅಚ್ಚಾದ ಪುಸ್ತಕ Printed Book

ಇವರಿಗೆ,

ಇವರಿಂದ :
**ಬಿ.ಎಂ.ಶ್ರೀ. ಪ್ರತಿಷ್ಠಾನ**
ಬಿ.ಎಂ.ಶ್ರೀ. ಪ್ರತಿಷ್ಠಾನದ ರಸ್ತೆ, ೩ನೇ ಮುಖ್ಯರಸ್ತೆ
ನರಸಿಂಹರಾಜ ಕಾಲೋನಿ, ಬೆಂಗಳೂರು - ೫೬೦೦೦೪
ಮೊಬೈಲ್ : ೯೯೭೨೮೧೨೧೨೭